ಓ.ಎಸ್. ನಂ. 8/2018 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 19.10.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎನ್.ಆರ್ ವಕೀಲರಿಂದಃ**

ದಾವಆಸ್ತಿಗಳ ಸರ್ವೆ ನಂ.85/2, 1-27 ಎಕರೆ, ಸರ್ವೆ ನಂ.51/1, 1-21 ಎಕರೆ, ಸರ್ವೆ ನಂ.51/2, 2-16 ಎಕರೆ ಮತ್ತು ಸರ್ವೆ ನಂ.65/ಪಿ1, 3 ಎಕರೆ ಆಗಿರುತ್ತದೆ. ದಾವಆಸ್ತಿಗಳ ಚಕ್ಕುಬಂದಿಯನ್ನು ಈಗ ಸರಿಯಾಗಿ ಹೇಳಲು ಸಾಧ್ಯವಿಲ್ಲ. ದಾವಆಸ್ತಿಗಳು ನೂರಲಕುಪ್ಪೆ ಗ್ರಾಮದಲ್ಲಿರುತ್ತವೆ. ಎಲ್ಲ ಆಸ್ತಿಗಳ ವಿಸ್ತೀರ್ಣ ಬೇರೆ ಬೇರೆ ಇದ್ದರೂ ಹೇಗೆ ಒಂದೇ ಮೌಲ್ಯಮಾಪನ ಮಾಡಿರುತ್ತೀರಿ ಎಂದರೆ ಸಾಕ್ಷಿದಾರರು ನನ್ನ ವಕೀಲರು ಆಸ್ತಿಗಳ ಒಟ್ಟು ಮೌಲ್ಯವನ್ನು ಕೇಳಿದ್ದು ಒಟ್ಟು ಮೌಲ್ಯವನ್ನು ಹೇಳಿರುತ್ತೇನೆ ಎನ್ನುವರು. ನನಗೆ ಕ್ರಯಕ್ಕೆ ಪಡೆಯುವ ಉದ್ದೇಶ ಇಲ್ಲದಿದ್ದರಿಂದ ನನ್ನ ದಾವಪತ್ರದಲ್ಲಿ ಪ್ರತಿಯೊಂದು ಆಸ್ತಿಯ ಮೌಲ್ಯವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕೃಷಿಕ ಎಂದರೆ ಸರಿ. ಅವರು ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. ಅವರಿಗೆ ದಾವಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯದ ಮೂಲ ಇರುವುದಿಲ್ಲ ಎಂದರೆ ಸಾಕ್ಷಿದಾರರು ಚೀಟಿ ವ್ಯವಹಾರ ಮಾಡುತ್ತಾರೆ ಎನ್ನುವರು. ಕ್ರಯದ ಕರಾರು ಒಪ್ಪಂದವಾಗಿದೆ ಎಂದು ಹೇಳುವ ಸಮಯದಲ್ಲಿ 3 ಮತ್ತು 4 ನೇ ಪ್ರತಿವಾದಿಯರು ಅಪ್ರಾಪ್ತ ವಯಸ್ಕರಾಗಿದ್ದರು. ಅವರು ಅಪ್ರಾಪ್ತ ವಯಸ್ಕರಾಗಿದ್ದರಿಂದ 1 ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡುವ ದರದು ಇರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಅವಶ್ಯಕತೆ ಇದ್ದರೆ ಅವರು ಒಂದು ಆಸ್ತಿಯನ್ನು ಮಾರಾಟ ಮಾಡುತ್ತಿದ್ದರು, ಎಲ್ಲ ಆಸ್ತಿಗಳನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿದಾರರು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎನ್ನುವರು. ನಾನು ಇದೇ ನ್ಯಾಯಾಲಯದಲ್ಲಿ ರಾಮೇಗೌಡ ಮತ್ತು ಇತರರ ವಿರುದ್ಧ ಓ.ಎಸ್ 106/2015 ರಂತೆ ದಾವೆ ಹಾಕಿದ್ದೆನು ಎಂದರೆ ಸರಿ. ಅವರ ವಿರುದ್ಧವೂ ಸಹ ಕರಾರಿನ ಆಧಾರದ ಮೇರೆಗೆ ನಿರ್ದಿಷ್ಟ ಪರಿಹಾರ ಕೋರಿ ದಾವೆ ಹಾಕಿದ್ದೆನು ಎಂದರೆ ಸರಿ. ನಾನು ಲೇವಾದೇವಿ ವ್ಯವಹಾರ ಮಾಡುತ್ತಿದ್ದು ಬಡ್ಡಿಗೆ ಸಾಲ ನೀಡಿ ಸಾಲಗಾರರಿಂದ ಖಾಲಿ ಪತ್ರಕ್ಕೆ ಸಹಿ ಮಾಡಿಸಿಕೊಂಡು ನಂತರ ದಾವೆ ಹಾಕುವ ಅಭ್ಯಾಸ ಹೊಂದಿರುತ್ತೇನೆ ಎಂದರೆ ಸರಿಯಲ್ಲ. 2011 ರಲ್ಲಿ 1 ನೇ ಪ್ರತಿವಾದಿಗೆ ನಾನು 5 ಲಕ್ಷ ಹಣವನ್ನು ಮಾಹೆಯಾನ ಶೇ.3 ರಂತೆ ಬಡ್ಡಿಗೆ ಸಾಲ ನೀಡಿದ್ದೆನು ಎಂದರೆ ಸರಿಯಲ್ಲ. ನಂತರ 2014 ರಲ್ಲಿ ಪುನಃ 1 ಲಕ್ಷ ಹಣವನ್ನು 1 ನೇ ಪ್ರತಿವಾದಿಯು ನನ್ನಿಂದ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ 1 ನೇ ಪ್ರತಿವಾದಿಯು ಮಾಹೆಯಾನ ಶೇ.6 ಬಡ್ಡಿ ನೀಡಲು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಮಾತುಕತೆಯ ಪ್ರಕಾರ 1 ನೇ ಪ್ರತಿವಾದಿಯು 2016 ರವರೆಗೆ ಪ್ರತಿ ತಿಂಗಳು 21 ಸಾವಿರ ಹಣವನ್ನು ಬಡ್ಡಿಯಾಗಿ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಂತರ ಬಡ್ಡಿ ಹಣ ಜಾಸ್ತಿಯಾಗಿದ್ದರಿಂದ ಹಣ ವಾಪಸ್ ನೀಡಲು ವಿಫಲರಾಗಿರುತ್ತಾರೆ ಎಂದರೆ ಸರಿಯಲ್ಲ. ನಂತರ 2017 ರ

ಜೂನ್ ತಿಂಗಳಿನಲ್ಲಿ 1 ನೇ ಪ್ರತಿವಾದಿಯು ಬಡ್ಡಿ ಪಾವತಿಸಲಾಗದೇ ಎಲ್ಲ ಅಸಲು ಹಣವನ್ನು ವಾಪಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸಾಲ ನೀಡುವ ಸಮಯದಲ್ಲಿ ಭದ್ರತೆಗಾಗಿ ಖಾಲಿ ಆನ್‌ಡಿಮ್ಯಾಂಡ್ ಪ್ರೋನೋಟ್ ಮತ್ತು 2 ಚೆಕ್ಕುಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅಸಲನ್ನು ವಾಪಸ್ ಮಾಡಿದಾಗ ಸದರಿ ದಾಖಲೆಗಳನ್ನು ವಾಪಸ್ ಕೇಳಿದ್ದು, ನಾನು ಹೆಚ್ಚಿನ ಬಡ್ಡಿ ಬರಬೇಕೆಂದು ಸದರಿ ದಾಖಲೆಗಳನ್ನು ವಾಪಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನಗೆ ಫೆಡರಲ್ ಬ್ಯಾಂಕ್, ಹ್ಯಾಂಡಪೋಸ್ಟ್ ಶಾಖೆಯ ಚೆಕ್ ನಂ.025449 ಮತ್ತು 025450 ಚೆಕ್ಕುಗಳನ್ನು 1 ನೇ ಪ್ರತಿವಾದಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಚೆಕ್ ಪೈಕಿ ಒಂದು ಚೆಕ್ಕನ್ನು ನಾನು ಅಮಾನ್ಯಕರಣಗೊಳಿಸಿ ನನ್ನ ಬೀಗರ ಮೂಲಕ ಮಂಗಳೂರಿನ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿಯ ವಿರುದ್ಧ ಚೆಕ್ ಅಮಾನ್ಯಕರಣ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸಾಕ್ಷಿದಾರರು 1 ನೇ ಪ್ರತಿವಾದಿಯು ನನ್ನ ಬೀಗರ ಬಳಿ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು, ಆ ಕಾರಣ ಚೆಕ್ ಅಮಾನ್ಯಕರಣ ಪ್ರಕರಣ ದಾಖಲಿಸಿರುತ್ತಾರೆ ಎನ್ನುವರು. ನನ್ನ ಬೀಗರಿಗೂ 1 ನೇ ಪ್ರತಿವಾದಿಗೂ ಪರಿಚಯವಿರುವುದಿಲ್ಲ ಎಂದರೆ ಸಾಕ್ಷಿದಾರರು ನನ್ನ ಮಗನ ಗೃಹ ಪ್ರವೇಶಕ್ಕೆ ಬಂದಾಗ ನನ್ನ ಬೀಗರ ಪರಿಚಯವಾಗಿರುತ್ತದೆ ಎನ್ನುವರು. ನಂತರ ಮಂಗಳೂರಿನ ಬಜ್ಪೆ ಪೋಲಿಸ್ ಠಾಣೆಯಲ್ಲಿ ರಾಜಿ ಪಂಚಾಯಿತಿ ನಡೆದು 3 ಲಕ್ಷ ಹಣವನ್ನು ನಾನು ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿದಾರರು ನನ್ನ ಬೀಗರು ಪೋನ್ ಮಾಡಿ 1 ನೇ ಪ್ರತಿವಾದಿಯಿಂದ ಹಣ ಪಡೆದುಕೊಂಡು ನಮಗೆ ನೀಡಿ ಎಂದು ಹೇಳಿದ್ದರಿಂದ ನಾನು ಹಣವನ್ನು ಪಡೆದುಕೊಂಡು ಬೀಗರಿಗೆ ನೀಡಿರುತ್ತೇನೆ ಎನ್ನುವರು. ನಾನೇ ಕೇಸ್ ದಾಖಲಿಸಿದ್ದರಿಂದ ನಾನೇ ಹಣ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ಭಾವಚಿತ್ರವು ಸದರಿ ಪೋಲಿಸ್ ಠಾಣೆಯಲ್ಲಿ ತೆಗೆದ ಭಾವಚಿತ್ರವಾಗಿದ್ದು ನಾನು ಹೋಗಿದ್ದೆನು ಎಂದರೆ ಸರಿ. ನನಗೆ 3 ಲಕ್ಷ ಹಣ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಹಣ ನನಗೆ ನೀಡಿದ್ದು, ನಂತರ ನನ್ನ ಬೀಗರಿಗೆ ತಲುಪಿಸಿರುತ್ತೇನೆ ಎನ್ನುವರು. ಸಾಕ್ಷಿದಾರರು ಸದರಿ ಭಾವಚಿತ್ರವನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ನಾನು ಹಣಕಾಸಿನ ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ನನ್ನ ನಡುವೆ ಹಣದ ವ್ಯವಹಾರ ಮಾತ್ರ ಇತ್ತು, ಜಮೀನಿಗೆ ಸಂಬಂಧಪಟ್ಟ ವ್ಯವಹಾರವಾಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸಾಲದ ಹಣವನ್ನು ನೀಡುವ ಸಮಯದಲ್ಲಿ ಖಾಲಿ ಸ್ಟಾಂಪ್ ಪೇಪರಿನ ಮೇಲೆ ಸಹಿ ಪಡೆದುಕೊಂಡಿದ್ದು ನಂತರ ಕರಾರನ್ನು ಸೃಷ್ಟಿ ಮಾಡಿಕೊಂಡು ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಕೃಷಿ ಜಮೀನನ್ನು ವ್ಯಾಪಾರ ಮಾಡುವ ದರದು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಶುದ್ಧಹಸ್ತದಿಂದ ಈ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಸೃಷ್ಟಿಸಿರುವ ದಾಖಲೆಯ ಆಧಾರದ ಮೇಲೆ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಈಗ 72 ವರ್ಷವಾಗಿರುತ್ತದೆ. ನನ್ನ ಮೂರು ಜನ ಮಕ್ಕಳು ವಿದೇಶದಲ್ಲಿರುತ್ತಾರೆ ಎಂದರೆ ಸಾಕ್ಷಿದಾರರು ಒಬ್ಬ ಮಗ ವಿದೇಶದಲ್ಲಿದ್ದು ಇನ್ನೊಬ್ಬ ಮಗ ಊರಿನಲ್ಲಿದ್ದು, ಮಗಳು ಸಹ ಇರುತ್ತಾಳೆ ಎನ್ನುವರು. ನನ್ನ ಮಕ್ಕಳು ವಿದೇಶದಲ್ಲಿರುವುದರಿಂದ ಕೃಷಿ ಜಮೀನನ್ನು ಖರೀದಿ ಮಾಡುವ ಯಾವುದೇ ಉದ್ದೇಶವಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಂದ ಹೆಚ್ಚಿನ ಹಣ ಪಡೆಯಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಯ ಮೌಲ್ಯ ಹೆಚ್ಚಾಗಿರುವುದರಿಂದ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಿನಾಂಕ 4.1.2018 ರಂದು ಈ ದಾವೆ ಸಲ್ಲಿಸಿರುತ್ತೇನೆ. ಪ್ರತಿವಾದಿಯು ಮಾಡಿಕೊಟ್ಟಿದ್ದಾನೆ ಎಂದು ಹೇಳುವ ಕರಾರುಪತ್ರವು ದಿನಾಂಕ 6.8.2014 ರಂದು ಆಗಿರುತ್ತದೆ. ನಾನು ಪ್ರತಿವಾದಿಯರಿಗೆ ದಿನಾಂಕ 19.2.2015 ರಂದು ನೋಟಿಸನ್ನು ನೀಡಿರುತ್ತೇನೆ. ನಾನು ನೋಟಿಸ್ ನೀಡಿದ ತಕ್ಷಣ ಈ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. 2 ವರ್ಷ 10 ತಿಂಗಳ ನಂತರ ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿ. ನನಗೆ ನಿಜವಾಗಿ ಆಸ್ತಿಯನ್ನು ಖರೀದಿ ಮಾಡುವ ಉದ್ದೇಶವಿದ್ದು ನಿಪಿ1 ಕರಾರುಪತ್ರ ಮಾಡಿಕೊಂಡಿದ್ದಲ್ಲಿ ಕೂಡಲೇ ದಾವೆಯನ್ನು ಹಾಕುತ್ತಿದ್ದೆ ಎಂದರೆ ಸಾಕ್ಷಿದಾರರು ಪ್ರತಿವಾದಿಯು ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದುಕೊಂಡು ಕ್ರಯಪತ್ರ ಬರೆದುಕೊಡುವುದಾಗಿ ಹೇಳಿದ್ದರು ಎನ್ನುವರು. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದಾವಪತ್ರದಲ್ಲಿ ನೋಟಿಸನ್ನು ಪ್ರತಿವಾದಿಯು ತಿರಸ್ಕರಿಸುತ್ತಾರೆ ಎಂದು ಬರೆದಿದ್ದು ಯಾವ ಕಾರಣಕ್ಕೆ 2 ವರ್ಷ 10 ತಿಂಗಳ ನಂತರ ದಾವೆಯನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿದಾರರು ಪ್ರತಿವಾದಿಯರು ನನ್ನನ್ನು ಭೇಟಿಯಾಗಿ ಕ್ರಯಪತ್ರ ಮಾಡಿಕೊಡುವುದಾಗಿ ಹೇಳಿರುತ್ತಾರೆ ಎನ್ನುವರು. ಪ್ರತಿವಾದಿಯರು ಆ ರೀತಿ ನನ್ನ ಬಳಿ ಹೇಳಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಆಸ್ತಿ ಮಾರಾಟ ಮಾಡುವ ಉದ್ದೇಶ ಇಲ್ಲದಿರುವುದರಿಂದ ಅವರು ದಾಖಲಾತಿಯನ್ನು ಒದಗಿಸಿಕೊಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.